ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ 15ನೇ ನವೆಂಬರ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಂ.ವಿ. **ವೆಂಕಟಪ್ಪ**) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಡಾ|| ರಾಜ್‌ಕುಮಾರ್‌ರವರು ವೀರಪ್ಪನ್‌ನಿಂದ ಬಿಡುಗಡೆಯಾಗಿರುವ ಸುದ್ದಿ ಕುರಿತು

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಡಾ|| ರಾಜ್‌ಕುಮಾರ್‌ರವರ ಬಿಡುಗಡೆಯಾಗಿದೆ ಎಂಬ ಸುದ್ದಿ ಎಲ್ಲಾ ಕಡೆ ಪ್ರಚಾರದಲ್ಲಿ ಇದೆ. ಸತ್ಯಮಂಗಲದ ಅತಿಥಿಗೃಹಕ್ಕೆ ಡಾ|| ರಾಜ್‌ಕುಮಾರ್ ಬಂದಿದ್ದಾರೆಂಬ ರೂಮರ್ ಸಹ ಇದೆ. ಸರ್ಕಾರಕ್ಕೆ ಇದರ ಬಗ್ಗೆ ಏನಾದರೂ ಖಚಿತವಾದ ಸುದ್ದಿ ಬಂದಿದ್ದರೆ ಅದನ್ನು ಈ ಸಭೆಗೆ ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲೇ ಇದ್ದಾರೆ.

ಅಧ್ಯಕ್ಷರು : ಡಾ|| ರಾಜ್‌ಕುಮಾರ್‌ರವರ ಬಿಡುಗಡೆಯಾಗಿದ್ದರೆ ಅದು ಇಡೀ ಕರ್ನಾಟಕಕ್ಕೆ ಸಂತೋಷಕರವಾದ ವಿಚಾರ ಆದರೆ ಮೊದಲು ಪ್ರಶ್ನೋತ್ತರಗಳು ಮುಗಿಯಲಿ, ಅನಂತರ ತಾವು ಕೇಳಿ

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಇಡೀ ರಾಜ್ಯದ ಜನರು ಬಹಳ ಕಾತುರದಿಂದ ಇದ್ದಾರೆ.

(ಅಧ್ಯಕ್ಷರ ಅಪ್ಪಣೆ ಮೇರೆಗೆ ಇದರ ಬಗ್ಗೆ ಮಾತನಾಡುತ್ತಿದ್ದ ಐದಾರು ಸದಸ್ಯರ ಮಾತುಗಳನ್ನು ದಾಖಲಿಸಲಿಲ್ಲ)

ಅಧ್ಯಕ್ಷರು : ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತ್ರ ಮಾತನಾಡಲು ಅವಕಾಶ ನೀಡಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕಳೆದ ಮೂರು ತಿಂಗಳಿಂದ ರಾಜ್ಯದಲ್ಲಿ ಒಂದು ರೀತಿಯ ಆತಂಕದ ವಾತಾವರಣವಿತ್ತು.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಲಿ, ಇನ್ನು ಒಂದು ಗಂಟೆಯಲ್ಲಿ ತಮಗೆ ಏನು ಸುದ್ದಿ ಸಿಗುತ್ತದೆ? ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲೇ ಇರುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಆ ಸುದ್ದಿ ನಿಜವೇ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಬಿಡಲಿ. ಅನಂತರ ವಿವರವಾಗಿ ಮಾತನಾಡೋಣ.

ಶ್ರೀ ಜೆ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ಈ ದಿನದ ಕಾರ್ಯಕ್ರಮ ಪಟ್ಟಿಯಲ್ಲಿ ಮೊದಲು ಏನಿದೆಯೋ ಅದರಂತೆ ಮಾಡಿ.

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ. ಆ ನಂತರ ಆ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬಹಳ ಸಂತೋಷದಿಂದ ಇದ್ದಾರೆ. ಅವರ ಮುಖ ಚಹರೆಯನ್ನು ನೋಡಿದರೆ ಡಾ|| ರಾಜ್‌ಕುಮಾರ್‌ರವರ ಬಿಡುಗಡೆಯಾಗಿರಬಹುದು. ಆ ಸುದ್ದಿ ಅವರಿಗೆ ಬಂದಿರಬಹುದು. ಅವರ ಆ ಸಂತೋಷವನ್ನು ನಮಗೂ ಹಂಚಬೇಕಾಗಿ ನಾವು ಕೇಳುತ್ತಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಡಾ|| ರಾಜ್‌ಕುಮಾರ್ ರವರ ಬಿಡುಗಡೆ ವಿಚಾರದಲ್ಲಿ ನಾನಾ ವಿಧವಾದಂಥ ವದಂತಿಗಳ ಬಗ್ಗೆ ಬೆಂಗಳೂರು ನಗರ ಮತ್ತು ರಾಜ್ಯದ ಹಲವಾರು ಭಾಗಗಳಿಂದ ದೂರವಾಣಿ ಕರೆಗಳು ಬರುತ್ತಿವೆ, ಆ ಸುದ್ದಿ ನಿಜವೇ ಎಂದು ಎಲ್ಲರೂ ಕೇಳುತ್ತಿದ್ದಾರೆ. ಆದರೆ ತಮಿಳುನಾಡು ಸರ್ಕಾರದಿಂದ ಇದುವರೆಗೆ ಯಾವುದೇ ಖಚಿತವಾದ ಮಾಹಿತಿ ಬಂದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರುಗಳೇನು ಈ ಬಗ್ಗೆ ಕಾತುರತೆಯನ್ನು ವ್ಯಕ್ತಪಡಿಸಿದ್ದಾರೋ ಅದೇ ಕಾತುರತೆಯಿಂದ ನಾವು ಕೂಡ ಆ ಸುದ್ದಿಗೋಸ್ಕರ ಕಾಯುತ್ತಾ ಇದ್ದೇವೆ. ಡಾ|| ರಾಜ್‌ಕುಮಾರ್‌ರವರು ಬಿಡುಗಡೆಯಾಗಿರುವ ಬಗ್ಗೆ ನಮಗೆ ಮಾಹಿತಿ ಬಂದ ತಕ್ಷಣ ಅದಕ್ಕೆ ಏನಾದರೂ ಕ್ರೆಡಿಬಲಿಟಿ ಇದ್ದರೆ ಮೊದಲು ಈ ಸದನಕ್ಕೆ ತಿಳಿಸಿ ಅನಂತರ ಬಾಕಿಯವರಿಗೆ ನಾನು ತಿಳಿಸುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬಾಗಿಲಕೋಟೆ ತಾಲ್ಲೂಕಿನ ಹೆಚ್ಚುವರಿ ಅಂಗನವಾಡಿ ಕೇಂದ್ರಗಳು

421 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ತಾಲ್ಲೂಕಿನಲ್ಲಿ ಇರುವ ನಗರ ಮತ್ತು ಗ್ರಾಮೀಣ ಭಾಗದ ಅಂಗನವಾಡಿ ಕೇಂದ್ರಗಳೆಷ್ಟು?